ದಿನಾಂಕ 25-09-2024 ರಂದು ಸಾಕ್ಷಿಗೆ ಪ್ರಮಾಣ ವಚನಬೋಧಿಸಿ ಪಾಟೀ ಸವಾಲಿಗೆ ಒಳಪಡಿಸಲಾಯಿತು.

**ಪಾಟೀ ಸವಾಲು :** ಪ್ರತಿವಾದಿ ಪರ ಶ್ರೀ ಎಸ್ ಎಸ್ ಕೆ ವಕೀಲರಿಂದ.

ನನಗೆ ಕನ್ನಡ ಮಾತನಾಡಲು ಬರುತ್ತದೆ. ನನ್ನ ವಾದ ಪತ್ರದಲ್ಲಿ ಬರೆದಿರುವ ವಿಷಯಗಳು ಗೊತ್ತಿದೆ. ನನ್ನ ಪ್ರತಿಜ್ಞಾ ಪತ್ರದಲ್ಲಿ ಬರೆದ ವಿಷಯಗಳು ಗೊತ್ತು.

ನಾವು ಒಟ್ಟು 4 ಜನ ಅಣ್ಣ-ತಮ್ಮಂದಿರು. ನಾವು ಯಾರೆಂದರೆ ಫಕೀರಾ, ಹನುಮಂತ, ಶಂಕರ ಹಾಗೂ ಶಂಬಾಜಿ ಆಗಿರುತ್ತದೆ. ನಾವು 4 ಜನ ಸಹೋದರರು ಬೇರೆ ಬೇರೆಯಾಗಿ ಅಂದಾಜು 20-30 ವರ್ಷಗಳು ಆದವು. ಆ ರೀತಿ ಬೇರೆ ಬೇರೆ ಆದಾಗ ಜಮೀನು ಮತ್ತು ಮನೆ ಆಸ್ತಿಗಳನ್ನು ವಿಭಾಗ ಮಾಡಿಕೊಂಡೆವು ಎಂದರೆ ಸರಿ.

ನಿಮಗೆ ಒಟ್ಟು ಎಷ್ಟು ವಿಸ್ತೀರ್ಣದ ಹೊಲ ಇದೆ ಎಂದರೆ 3 ಎಕರೆ ಚಿಲ್ಲರೆ ಗುಂಟೆ ಇದೆ ಎನ್ನುತ್ತಾರೆ. ಸದರಿ ಕ್ಷೇತ್ರದಲ್ಲಿ ನಾವು ಮೂರು ಭಾಗ ಮಾಡಿಕೊಂಡಿದ್ದೇವೆ. ಸದರಿ ಮೂರು ಭಾಗಗಳು ನನಗೆ , ಫಕೀರಾ ಮತ್ತು ಹನುಮಂತನಿಗೆ ಬಂದಿರುತ್ತದೆ. ಸದರಿ 3 ಎಕರೆ ಚಿಲ್ಲರೆ ಗುಂಟೆ ಜಮೀನಿನಲ್ಲಿ ಹನುಮಂತನಿಗೆ 01-15-12 ಬಂದಿರುತ್ತದೆ ಎಂದರೆ ಸರಿ.

ಹನುಮತ ನ ಪಾಲಿಗೆ ಬಂದ ಜಮೀನು ಪೂರ್ವ ದಿಕ್ಕಿಗೆ ಅಂದರೆ ಬಿ ಕೆ ಹಳ್ಳಿ ಗ್ರಾಮದ ಕಡೆ ಮುಖ ಮಾಡಿ ಇದೆ ಎಂದರೆ ಸರಿ. ಸದರಿ ಹನುಮಂತನು ತನ್ನ ಪಾಲಿನ ಜಮೀನಿನಲ್ಲಿ 7-8 ಜನರಿಗೆ ತುಂಡು ತುಂಡು ಭಾಗಗಳನ್ನು ಮನೆ ಕಟ್ಟಲು ಅವರಿಗೆ ಮಾರಾಟ ಮಾಡಿದ್ದಾನೆ ಎಂದರೆ ಸರಿಯಲ್ಲ. ಸದರಿ ಹನುಮಂತನ ಜಮೀನಿನಲ್ಲಿ ನಾಗೇಂದ್ರ ಅಂಗಡಿ, ಪಾಂಡು ಬಡಗಿ, ನಾರಾಯಣ ಸೋನಾರ, ಗೋಪಾಲ ಗೌಡಾ, ಚೆನ್ನಪ್ಪಾ ಅಂಗಡಿ ಮತ್ತು ಲಕ್ಷ್ಮೀ ಗೋಪಾಲ ಪಾಟೀಲ ರವರು ತುಂಡು ತುಂಡು ಜಮೀನನ್ನು ಮನೆ ಕಟ್ಟಲು ಖರೀದಿಸಿ ತಮ್ಮ ತಮ್ಮ ಮನೆಗಳನ್ನು ಅಲ್ಲಿ ಕಟ್ಟಿಕೊಂಡಿದ್ದಾರೆ ಸರಿಯಲ್ಲ.

ಲಕ್ಷ್ಮೀ ಗೋಪಾಲ ಪಾಟೀಲ ರವರು 2004 ರಲ್ಲಿ ಹನುವಂತ ತಂಬೂರಕರ ರವರ ಜಮೀನಿನ ಸ್ವಲ್ಪ ಭಾಗ ಖರೀದಿಸಿ ಅಲ್ಲಿ ಮನೆ ಕಟ್ಟಿಕೊಂಡಿದ್ದಾರೆ ಎಂದರೆ ಸರಿಯಲ್ಲ. ನಾರಾಯಣ ಸೋನಾರ ರವರು 2012 ರಲ್ಲಿ ಹನುವಂತ ತಂಬೂರಕರ ರವರ ಜಮೀನಿನ ಸ್ವಲ್ಪ ಭಾಗ ಖರೀದಿಸಿ ಅಲ್ಲಿ ಮನೆ ಕಟ್ಟಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಅದೇ ರೀತಿ ಸುರೇಶ ರವರು 2011 ರಲ್ಲಿ ಹನುವಂತ ತಂಬೂರಕರ ರವರ ಜಮೀನಿನ ಸ್ವಲ್ಪ ಭಾಗ ಖರೀದಿಸಿ ಅಲ್ಲಿ ಮನೆ ಕಟ್ಟಿಕೊಂಡಿದ್ದಾರೆ ಎಂದರೆ ಸರಿಯಲ್ಲ.

ನಮ್ಮ ಮನೆ ಹಳಿಯಾಳ– ಬಿ ಕೆ ಹಳ್ಳಿ ಮುಖ್ಯ ರಸ್ತೆಯ ಕಡೆ ಮುಖ ಮಾಡಿದೆ ಎಂದರೆ ಸರಿ. ನಮ್ಮ ಮನೆಗೆ ತಾಗಿ ಪೂರ್ವ ದಿಕ್ಕಿಗೆ ನಾವು ಒಂದು ಶೆಡ್ ಕಟ್ಟಿಕೊಂಡಿದ್ದೇವೆ ಎಂದರೆ ಸರಿ. ಸದರಿ ಶೆಡ್ ನ ವಿಸ್ತೀರ್ಣ ಒಂದು ಟ್ರ್ಯಾಕ್ಟರ್ ನಿಲ್ಲುವಷ್ಟು ಇದೆ ಎಂದರೆ ಸರಿ. ಸದರಿ ಶೆಡ್‌ಗೆ ತಾಗಿ ಪೂರ್ವ ದಿಕ್ಕಿಗೆ ಸುಮಾರು 3 ಗುಂಟೆ ಜಾಗ ಖುಲ್ಲಾ ಇದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸದರಿ ಖುಲ್ಲಾ ಜಾಗ ತನ್ನ ಜಾಗ ಎನ್ನುತ್ತಾರೆ. ಸದರಿ ಖಾಲಿ ಜಾಗಕ್ಕೆ ತಾಗಿ ನಾಗೇಂದ್ರ ರವರ ಮನೆ ಇದೆ ಎಂದರೆ ಸಾಕ್ಷಿಯು ಅಲ್ಲಿ ಯಾವುದೇ ಮನೆ ಇಲ್ಲ ಎನ್ನುತ್ತಾರೆ. ಸದರಿ 3 ಗುಂಟೆ ಜಾಗದ ನಂತರ ಹನುಮಂತ ತಂಬೂರಕರ ರವರಿಂದ ಖರೀದಿಸಿದ ಜಾಗದಲ್ಲಿ ನಾಗೇಂದ್ರ ರವರ ಮನೆ ಹಾಗೂ ಆ ನಂತರ ಅದೇ ರೀತಿಯಾಗಿ ಖರೀದಿಸಿದ ಬೇರೆಯವರ ಮನೆಗಳು ಸಾಲಾಗಿ ಇರುತ್ತವೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಅಲ್ಲಿ ಯಾವುದೇ ಮನೆಗಳು ಇಲ್ಲ ಎನ್ನುತ್ತಾರೆ. ಹನುಮಂತ ತಂಬೂರಕರ ರವರಿಂದ ಪ್ರತಿವಾದಿ ಖರೀದಿ ಮಾಡಿದ ಜಾಗವನ್ನು ಪ್ರತಿವಾದಿಯೇ ತನ್ನ ಕಬ್ಜಾ ವಹಿವಾಟಿನಲ್ಲಿ ಹೊಂದಿ ಅನುಭವಿಸಿಕೊಂಡು ಬರುತ್ತಿದ್ದಾನೆ ಎಂದರೆ ಸರಿಯಲ್ಲ. ಆ ರೀತಿ ಖರೀದಿ ಮಾಡಿದ ನಂತರ ಬಿ ಕೆ ಹಳ್ಳಿ ಗ್ರಾಮ ಪಂಚಾಯತಿಯಲ್ಲಿ ಸದರಿ ಆಸ್ತಿಗೆ 586 ಎಂದು ಸಂಖ್ಯೆ ನೀಡಿ ಪ್ರತಿವಾದಿಯ ಹೆಸರು ದಾಖಲಾಗಿರುತ್ತದೆ ಎಂದರೆ ಸಾಕ್ಷಿಯು ಎಲ್ಲವನ್ನೂ ಪ್ರತಿವಾದಿಯೇ ಮಾಡಿಕೊಂಡಿದ್ದಾನೆ ಎನ್ನುತ್ತಾರೆ.

ಒಂದು ಆಸ್ತಿಗೆ ಪಂಚಾಯತಿಯವರು ಕ್ರಮ ಸಂಖ್ಯೆ ನೀಡುವ ಪೂರ್ವದಲ್ಲಿ ಸಭೆ ಕರೆದು ಸಭೆಯಲ್ಲಿ ಚರ್ಚೆ ಮಾಡಿ ಠರಾವು ಪಾಸು ಮಾಡಿದ ನಂತರ ಅಂತಹ ಆಸ್ತಿಗೆ ಕ್ರಮ ಸಂಖ್ಯೆ ನೀಡಿ ಸದರಿ ಆಸ್ತಿ ಯಾರಿಗೆ ಸೇರಿದೆಯೋ ಅವರ ಹೆಸರನ್ನು ದಾಖಲಿಸುತ್ತಾರೆ ಎಂದರೆ ಸಾಕ್ಷಿ ಸುಳ್ಳು ಎನ್ನುತ್ತಾರೆ. ಅದೇ ರೀತಿ ಪ್ರತಿವಾದಿಯ ಆಸ್ತಿಗೆ ಆತನ ಹೆಸರು ದಾಖಲಿಸುವಾಗಲೂ ಕೂಡ ನನ್ನನ್ನು ಕರೆದು ಚರ್ಚಿಸಿ ನನ್ನ ಒಪ್ಪಿಗೆಯ ನಂತರ ಪ್ರತಿವಾದಿಯ ಹೆಸರನ್ನು ಸದರಿ ಆಸ್ತಿಗೆ ದಾಖಲಿಸಿದ್ದಾರೆ ಎಂದರೆ ಸರಿಯಲ್ಲ. ಆ ರೀತಿ ಆಸ್ತಿಯನ್ನು ಪ್ರತಿವಾದಿಯು ಖರೀದಿಸಿದ ನಂತರ ಆತನೇ ಪಂಚಾಯತಿಗೆ ಕಂದಾಯ ಪಾವತಿಸುತ್ತಾ ಬಂದಿರುತ್ತಾನೆ ಎಂದರೆ ಸಾಕ್ಷಿಯು ಪ್ರತಿವಾದಿಯು ಎಲ್ಲವನ್ನೂ ರಚಿಸಿಕೊಂಡಿದ್ದಾರೆ ಎನ್ನುತ್ತಾರೆ.

ನಿಮ್ಮ ವಾದ ಪತ್ರದಲ್ಲಿ ಪ್ರತಿವಾದಿಯು ಸೊಸೈಟಿಯ ಕಾರ್ಯದರ್ಶಿ ಎಂದು ನಮೂದಿಸಿರುವುದು ಸುಳ್ಳು ಎಂದರೆ ಸಾಕ್ಷಿಯು ಆ ರೀತಿ ವಾದ ಪತ್ರದಲ್ಲಿ ನಮೂದಿಸಿರುವುದು ಸುಳ್ಳು ಎನ್ನುತ್ತಾರೆ. ನನ್ನ ಜಮೀನಿನಲ್ಲಿ ನಾನು ಕಟ್ಟಿಕೊಂಡ ಮನೆಯ ಜಾಗವನ್ನು ನಾನು ವ್ಯವಸಾಯೇತರ ಭೂಮಿಯನ್ನಾಗಿ ಪರಿವರ್ತನೆ ಮಾಡಿಕೊಂಡಿಲ್ಲ. ಸದರಿ ನನ್ನ ಮನೆಗೆ ಪಂಚಾಯತಿಯವರು ನಂಬರ ನೀಡಿರುವುದಿಲ್ಲ. ನನ್ನ ಜಮೀನಿನಲ್ಲಿ ಕಟ್ಟಿಕೊಂಡಿರುವ ಮನೆಯಲ್ಲಿ ನಾನು ವಾಸ ಇರುವುದಿಲ್ಲ ಬದಲಾಗಿ ಊರಿನಲ್ಲಿರುವ ಮನೆಯಲ್ಲಿ ಇರುತ್ತೇನೆ ಎಂದರೆ ಸರಿಯಲ್ಲ.

ಪ್ರತಿವಾದಿಯು ಮೇಲೆ ಹೇಳಿದ 3 ಗುಂಟೆ ಖುಲ್ಲಾ ಜಾಗದಲ್ಲಿ ಮನೆ ಕಟ್ಟಲು ಜೆಸಿಬಿ ಮತ್ತು ಟ್ರ್ಯಾಕ್ಟರ ಸಹಾಯದಿಂದ ಪಾಯಾ ತೆಗೆಯುತ್ತಿದ್ದರು. ಎಂದರೆ ಸಾಕ್ಷಿಯು ಸದರಿ ಪ್ರತಿವಾದಿಯ ಕೆಲಸವನ್ನು ನಾವು ಬಂದ್ ಮಾಡಿದ್ದೇವೆ

ಎನ್ನುತ್ತಾರೆ. ಸದರಿ ಜಾಗವನ್ನು ಪ್ರತಿವಾದಿಯು ಹನುಮಂತ ತಂಬೂರಕರ ರವರಿಂದ ಖರೀದಿ ಮಾಡಿದ ಜಾಗ ಆಗಿರುವುದರಿಂದ ನಿಮಗೆ ಪ್ರತಿವಾದಿಯ ಕಟ್ಟಡ ನಿರ್ಮಾಣ ಕಾಮಗಾರಿಯನ್ನು ಬಂದ್ ಮಾಡಲು ಯಾವುದೇ ಅಧಿಕಾರ ಇಲ್ಲ ಎಂದರೆ ಸಾಕ್ಷಿಯು ತಾನು ಬಂದ್ ಮಾಡಿದ್ದೇನೆ ಎನ್ನುತ್ತಾರೆ. ಸದರಿ 3 ಗುಂಟೆ ಜಾಗೆಗೆ ನಾನು ಮಾಲಕ ಆಗದೇ ಇದ್ದರೂ ಸಹ ಪ್ರತಿವಾದಿಯ ವಿರುದ್ಧ ನಿರ್ಬಂಧಕಾಜ್ಞೆ ಕೋರಿ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯ ವಿರುದ್ಧ ದಾವೆ ಸಲ್ಲಸಲು ಯಾವುದೇ ವ್ಯಾಜ್ಯ ಕಾರಣ ಉಂಟಾಗಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯು ಸುಳ್ಳು ದಾಖಲೆ ಮಾಡಿಕೊಂಡಿರುವುದು ನನಗೆ ಆತನು ಪಾಯಾ ತೆಗೆಯಲು ಬಂದಾಗ ಗೊತ್ತಾಯಿತು. ಆ ರೀತಿ ಗೊತ್ತಾದ ನಂತರ ಪ್ರತಿವಾದಿಯ ವಿರುದ್ಧ ತಹಶೀಲ್ದಾರ್ ಕಚೇರಿ ಹಾಗೂ ಪೋಲಿಸ ಠಾಣೆಯಲ್ಲಿ ದೂರನ್ನು ಸಲ್ಲಿಸಿದ್ದೇನೆ. ಸದರಿ ದೂರುಗಳ ಪ್ರತಿಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇನೆ. ಆ ರೀತಿ ಯಾವುದೇ ದೂರನ್ನು ನೀಡದಿದ್ದರೂ ಮತ್ತು ಅವುಗಳ ಪ್ರತಿಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸದಿದ್ದರೂ ದೂರು ನೀಡಿದ್ದೇನೆ ಹಾಗೂ ಅವುಗಳ ಪ್ರತಿಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ 3 ಗುಂಟೆ ಜಾಗ ಪ್ರತಿವಾದಿಗೆ ಸೇರಿದ ಜಾಗ ಆಗಿರುವುದರಿಂದ ಅದರ ಮೇಲೆ ನನಗಾಗಲೀ ಅಥವಾ ನನ್ನ ಕುಟುಂಬದ ಸದಸ್ಯರಿಗಾಗಲೀ ಯಾವುದೇ ರೀತಿಯ ಹಕ್ಕು ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ).

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ

ಪ್ರ.ದ.ನ್ಯಾದಂ., ಹಳಿಯಾಳ.